ಹೆಚ್ಚುವರಿ ದಿವಾಣಿ ನ್ಯಾಯಾಧೀಶರು ಹಾಗೂ ಜೆ.ಎಂ.ಎಫ್.ಸಿ., ಇಂಡಿ.
ಇವರ ನ್ಯಾಯಾಲಯದಲ್ಲಿ.

ಓ.ಎಸ್.ನಂ. : 359/2012
ಸಿ.ಡಬ್ಲ್ಯೂ.: 1

ಸಾಕ್ಷಿದಾರರ ಹೆಸರು : ಪೋಮು ತಂ.ಲಕ್ಷ್ಮಣ ರಾಠೋಡ

ವಯಸ್ಸು : 50 ವರ್ಷ

ಉದ್ಯೋಗ : ತಾಲೂಕು ಸರ್ವೆಯರ

ವಾಸ ಸ್ಥಳ : ಇಂಡಿ.

(ಈ ದಿವಸ ದಿನಾಂಕ 02-08-2022 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು)

**ಮುಖ್ಯ ವಿಚಾರಣೆ ಶ್ರೀ ಐ.ಎಸ್.ಎಂ., ವಕೀಲರಿಂದ:**

1) ನಾನು ಕಳೆದ 06 ವರ್ಷಗಳಿಂದ ಇಂಡಿ ತಾಲೂಕಿನಲ್ಲಿ ತಾಲೂಕು ಸರ್ವೆಯರ ಆಗಿ ಕರ್ತವ್ಯ ಮಾಡುತ್ತಿದ್ದೇನೆ. ಪ್ರಸ್ತುತ ಪ್ರಕರಣದಲ್ಲಿ ನಾನು ನ್ಯಾಯಾಲಯದ ನಿಯೋಗಿಯಾಗಿ ಕರ್ತವ್ಯ ನಿರ್ವಹಿಸುವಂತೆ ನಮ್ಮ ಮೇಲಾಧಿಕಾರಿಗಳಾದ ಭೂ ದಾಖಲೆಗಳ ಸಹಾಯಕ ನಿರ್ದೇಶಕರು ನ್ಯಾಯಾಲಯದ ಆದೇಶದ ರೀತ್ಯ ನನ್ನನ್ನು ನೇಮಿಸಿರುತ್ತಾರೆ.

2) ಮೊದಲ ಬಾರಿಗೆ ನ್ಯಾಯಾಲಯದಿಂದ ಕಮೀಷನರ ವಾರಂಟನ್ನು ಪಡೆದು ಉಭಯ ಪಕ್ಷಗಾರರಿಗೆ ದಿನಾಂಕ 13-1-2015 ರಂದು ನೋಟೀಸನ್ನು ಜಾರಿಗೊಳಿಸಿ, ದಿನಾಂಕ 19-1-2015 ರಂದು ನಿಯೋಗಿಯಾಗಿ ನೇಮಕಗೊಂಡು ವಿವಾದಿತ ಸ್ಥಳಕ್ಕೆ ನಾನು ಭೇಟಿ ಕೊಡುತ್ತಿದ್ದು, ತಾವು ಸ್ಥಳದಲ್ಲಿ ದಾಖಲೆಗಳ ಜೊತೆ ಹಾಜರಿರುವಂತೆ ಸೂಚಿಸಿರುತ್ತೇನೆ. ನಂತರ ದಿನಾಂಕ 19.01.2015 ರಂದು ನಾನು ಸ್ಥಳಕ್ಕೆ ಬೆಳಿಗ್ಗೆ 10.30 ಘಂಟೆಗೆ ಭೇಟಿ ಕೊಟ್ಟು, ಉಭಯ ಪಕ್ಷಗಾರರ ಸಮಕ್ಷಮ ಅಳತೆ ಕಾರ್ಯವನ್ನು ಪೂರೈಸಿರುತ್ತೇನೆ. ನಂತರ ನಾನು ಪಂಚನಾಮೆ ಕ್ರಮವನ್ನು ಜರುಗಿಸಿ ನಕ್ಷೆ ತಯಾರಿಸಿ, ವಾದಿ ಮತ್ತು ಪ್ರತಿವಾದಿಗಳು ನೀಡಿದ ಸೂಚನಾ ಪಟ್ಟಿಗೆ ಉತ್ತರ ನೀಡಿ ನ್ಯಾಯಾಲಯಕ್ಕೆ ವರದಿ ನಿವೇದಿಸಿಕೊಂಡಿರುತ್ತೇನೆ.

3) ನಂತರ ನಾನು ಎರಡನೇ ಬಾರಿಗೆ ನ್ಯಾಯಾಲಯದಿಂದ ಕಮೀಷನರ್ ವಾರಂಟನ್ನು ಪಡೆದು, ದಿನಾಂಕ 14.08.2018 ರಂದು ಉಭಯ ಪಕ್ಷಗಾರರಿಗೆ ನೋಟೀಸ್ ಜಾರಿ

ಮಾಡಿ ದಿನಾಂಕ 24.08.2018 ರಂದು ಸ್ಥಳಕ್ಕೆ ಭೇಟಿ ಕೊಟ್ಟು, ಮತ್ತೊಮ್ಮೆ ಅಳತೆ ಕಾರ್ಯ ನೆರವೇರಿಸಿ ನ್ಯಾಯಾಲಯಕ್ಕೆ ನಕ್ಷೆ, ವರದಿ ಮತ್ತು ಮಹಾಜರ ನಿವೇದಿಸಿಕೊಂಡಿರುತ್ತೇನೆ.

4) ನಾನು ಉಭಯ ಪಕ್ಷಗಾರರು ನೀಡಿದ ಸೂಚನಾ ಪಟ್ಟಿಗೆ ಅನುಗುಣವಾಗಿ ಅಳತೆ ಮಾಡಿ ವಾಸ್ತವ ಸಂಗತಿಯನ್ನು ನನ್ನ ವರದಿಯಲ್ಲಿ ನಮೂದಿಸಿರುತ್ತೇನೆ.

(ಈ ಹಂತದಲ್ಲಿ ಕಡತವನ್ನು ಪರಿಶೀಲಿಸಿದಾಗ ಸಾಕ್ಷಿಯು ಮೊದಲ ಬಾರಿಗೆ ನೀಡಿದ ನಕ್ಷೆಯು ಕಂಡುಬಂದಿರುವುದಿಲ್ಲ. ಆ ಕಾರಣದಿಂದ ಸಾಕ್ಷಿಯು ಮುಂದಿನ ವಿಚಾರಣಾ ದಿನಾಂಕದಂದು ಹಾಜರುಪಡಿಸುವುದಾಗಿ ತಿಳಿಸಿದ್ದರಿಂದ ಸಾಕ್ಷಿಯ ಮುಂದುವರೆದ ವಿಚಾರಣೆಯನ್ನು ಮುಂದೂಡಲಾಯಿತು).

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಲಾಯಿತು)

ಓ ಹೆ ಕೆ ಸರಿ ಇದೆ

ಹೆಚ್ಚುವರಿ ದಿವಾಣಿ ನ್ಯಾಯಾಧೀಶರು
ವ ಜೆ.ಎಂ.ಎಫ್.ಸಿ., ಇಂಡಿ.